ಸಮಿತಿಯು ಸಭೆಯಲ್ಲಿ ನದಿಗಳಿಂದ ಪ್ರತಿ ವರ್ಷವು ಬೇಸಿಗೆ ಕಾಲದಲ್ಲಿ (ಫೆಬ್ರುವರಿಯಿಂದ ಜೂನ್ ಕೊನೆಯ ವರೆಗೆ) ನೀರಾವರಿಗೆ ನೀರನ್ನು ಎತ್ತುವುದನ್ನು ನಿಷೇದಿಸಬೇಕೆಂದು ನಿರ್ಧರಿಸಲಾಯಿತು. ಇಂತಹ ಗ್ರಾಮಗಳು ಮತ್ತು ನಗರಗಳಿಗೆ ಕುಡಿಯಲುವ ನೀರಿನ ಆಧಾವವು ಉಂಟಾಗದಿರಲೆಂಬ ಉದ್ದೇಶದಿಂದ ಇಂತಹ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬೇಕೆಂದು ಸಂತ್ರೋಲೆಯಲ್ಲಿ ಸೂಚನೆ ಕೊಡಲಾಯಿತು.

ಆ) ರೈತರಿಗೆ ಅನಾನುಕೂಲವಾಗುತ್ತದೆಂದು ಜನವಿಗಳು ಬಂದಿರುವುದರಿಂದ ಮತ್ತು ಕುಡಿಯುವ ನೀರಿನ ಲಭ್ಯತೆಯು ಸುಧಾರಿಸಿರುವುದರಿಂದಲೂ ಇಂತಹ ನದಿ ದಂಡೆಗಳ ಮೇಲಿನ ನೀರಾವರಿ ಪಂಪುಸೆಟ್ಟುಗಳಿಗೆ ೧೯೮೮ನೇ ಇಸವಿಯ ಬೇಸಿಗೆ ತಿಂಗಳುಗಳಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದು ಹಾಕ ಬಾರದೆಂದು ವಿದ್ಯುತ್ ಮಂಡಳಿಯವರಿಗೆ ಸೂಚನೆ ಕೊಡಲಾಗಿದೆ.

ಶ್ರೀ ಕೆ. ಪಿ. ಮಗೆನ್ನವರ್.— ಮಾನ್ಯ ಅಧ್ಯಕ್ಷರೇ, ಹಾಗಾದರೆ ನಾನು ಸರ್ಕಾರಕ್ಕೆ ರೈತರ ಪರವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

## ಅಥಣಿ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ

೩೮೮. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಥಣಿ ವಿಧಾನ ಸಭಾ ಕ್ಷೇತ್ರದಿಂದ ಸಹಕಾರೀ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಲಾಗಿದೆಯೇ, ಯಾವಾಗ ಹಾಗೂ ಯಾರಿಂದ ?

ಆ) ಈ ಕಾರ್ಖಾನೆ ಸ್ಥಾಪನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆಯೇ, ನೀಡಿದ್ದರೆ ಅದು ಈಗ ಯಾವ ಹಂತದಲ್ಲಿದೆ ?

ಇ) ಅಥಣಿ ತಾಲ್ಲೂಕಿನಲ್ಲಿ ಎಷ್ಟು ಸಹಕಾರೀ ಕಾರ್ಖಾನೆಗಳಿವೆ ?

ಈ) ತಾಲ್ಲೂಕಿನಲ್ಲಿ ಬೆಳೆಯಂತ್ತಿರುವ ಕಬ್ಬಿನ ಪ್ರಮಾಣವೇನು ?

ಉ) ಕಳೆದ ೩ ವರ್ಷಗಳಲ್ಲಿ (೧೯೮೭ರ ಡಿಸೆಂಬರ್ ಅಂತ್ಯದವರೆಗೆ) ಈ ಬೆಳೆಯನ್ನು ಎಷ್ಟು ಎಕರೆ ಗಳಲ್ಲಿ ಬೆಳೆಸಲಾಗುತ್ತಿದೆ ?

ಊ) ಅಥಣಿ ತಾಲ್ಲೂಕಿನಲ್ಲಿರುವ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿ ಗಳು) —

ಅ) ಹೌದು. ಶ್ರೀ ಆರ್. ವಿ. ಜೋತಿಯವರು ದಿನಾಂಕ ೨೬.೩.೧೯೮೭ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಆ) ಅರ್ಜಿಯನ್ನು ಭಾರತ ಸರ್ಕಾರಕ್ಕೆ ಶಿಫಾರ್ಸು ಮಾಡಲಾಗಿದೆ.

ಇ) ಸಹಕಾರೀ ರಂಗದಲ್ಲಿ ಸದ್ಯದಲ್ಲಿ ಯಾವ ಸಕ್ಕರೆ ಕಾರ್ಖಾನೆಯು ಈ ತಾಲ್ಲೂಕಿನಲ್ಲಿ ಇಲ್ಲ.

ಈ) ಕಬ್ಬಿನ ಪ್ರಮಾಣ ೧೫ ಲಕ್ಷ ಟನ್‌ಗಳೆಂದು ಅಂದಾಜು ಮಾಡಲಾಗಿದೆ.

ಉ) ಸುಮಾರು ೨೦ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಳಸಲಾಗುತ್ತಿದೆ.

ಊ) ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಉಗರ್ ಸಕ್ಕರೆ ಕಾರ್ಖಾನೆ ಮಾತ್ರ ಇದ್ದು ಇದರ ಕಬ್ಬು ಅರೆಯುವ ಸಾಮರ್ಥ್ಯ ದಿನಂಪ್ರತಿ ೫೦೦೦ ಮೆ ಟನ್ ಮಾತ್ರ ಆಗಿದೆ.

ಶ್ರೀಮತಿ. ಲೀಲಾದೇವಿ. ಆರ್. ಪ್ರಸಾದ್,—ಮಾನ್ಯ ಅಧ್ಯಕ್ಷರೇ, ಬಹಳ ವರ್ಷಗಳ ನಂತರ ಅಥಣಿ ಮತ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಸೆಂಟ್ರಲ್

ಗೌರ್ನಮೆಂಟಿಗೆ ಒತ್ತಾಯ ಮಾಡಿ, ಈ ವರ್ಷದೆ ಒಳಗಾಗಿಯೇ ಇದಕ್ಕೆ ಲೈಸನ್ಸ್ ದೊರಕತಕ್ಕದ್ದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ. ಹಾಗೂ ಇಲ್ಲಿ ೨೦ ಲಕ್ಷ ಟನ್ ಕಬ್ಬನ್ನು ಬೆಳೆಯುತ್ತಿರುವಾಗ, ಅಲ್ಲಿರತಕ್ಕಂಥ ಒಂದೇ ಒಂದು ಫ್ಯಾಕ್ಟರಿಗೆ ಇದನ್ನು ಆರೆಯಂತಕ್ಕ ಸಾಮರ್ಥ್ಯ ಇಲ್ಲ ಎಂದು ಕಂಡು ಬಂದಿರುವುದರಿಂದ ಮಾನ್ಯ ಮಂತ್ರಿಯವರು ಎಷ್ಟು ದಿವಸದ ಒಳಗಾಗಿ ಇನ್ನೊಂದಂ ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಕೇಳುತ್ತೇನೆ.

ಶ್ರೀ ಜೆ-ಹೆಚ್.ಪಟೇಲ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಂಚಿಯೇ ಸಲ್ಲಿಸಿದ್ದ ಅರ್ಜಿಯಾದರೂಕೂಡಾ, ಹಲವು ಕಾರಣಗಳಿಂದ ಇದು ತಿರಸ್ಕರಿಸಲ್ಪಟ್ಟಿತ್ತು. ಭಾರತ ಸರಕಾರದ ನಿಯಮಗಳ ಪ್ರಕಾರ ಯಾವುದೇ ಸಕ್ಕರೆ ಕಾರ್ಖಾನೆಗೆ ೨೫೦೦ ಟನ್ ಕಬ್ಬನ್ನು ಆರೆಯಂತಕ್ಕಂಥ ಸಾಮರ್ಥ್ಯ ಇರಬೇಕಂ. ಈ ಮುಂಚೆ ೧೨೫೦ ಟನ್ ಕಬ್ಬನ್ನು ಆರೆಯತಕ್ಕಂಥ ಹಲವಾರು ಕಾರ್ಖಾನೆಗಳಿಗೆ ಪರವಾನಗಿಯನ್ನು, ಖಾಸಗಿ, ಸಹಕಾರಿಹಾಗೂ ಜಂಟಿ ವಲಯದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ನೀಡಿದ್ದಾರೆ. ಪರಿಷ್ಕೃತ ನೀತಿಯ ಪ್ರಕಾರ ೨೫೦೦ ಟನ್ ಕಬ್ಬನ್ನು ಆರೆಯುವ ಸಾಮರ್ಥ್ಯ ತೋರಿಸಿದರೆ ಮಾತ್ರ ಲೈಸೆನ್ಸ್ ಕೊಡುತ್ತಾರೆ. ಅದಕ್ಕನುಸಾರವಾಗಿ ಇವರು ಯೋಜನೆಯನ್ನು ಪರಿಷ್ಕರಿಸಿದ್ದಾರೆ. ಅದನ್ನು ಸಮರ್ಥಿಸಿ ರಾಜ್ಯ ಸರಕಾರ ರೆಕಮೆಂಡ್ ಮಾಡಿರುತ್ತದೆ. ಅವರಿಗೆ ಪರವಾನಗಿ ಸಿಗತಕ್ಕಂಥ ಅವಕಾಶ ಇದೆ. ಮತ್ತೊಂದು ಈ ಸಂದರ್ಭದಲ್ಲಿ ನಾನು ಹೇಳುವುದು ಎಂದರೆ, ನಮ್ಮ ರಾಜ್ಯದಲ್ಲಿ ಬೆಳೆಯುವ ಹೆಚ್ಚಿನ ಕಬ್ಬು ಏನಿದೆ ಅದು ಬೇರೆ ರಾಜ್ಯಗಳಿಗೆ ಹೋಗುತ್ತಿದೆ ನಿಜ. ಈ ರೀತಿ ಬೇರೆ ರಾಜ್ಯಗಳಿಗೆ ಹೋಗುವುದಕ್ಕೆ ಹಲವಾರು ಕಾರಣಗಳಿವೆ. ಅದನ್ನು ನಾನು ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡುತ್ತೇನೆ.

ಶ್ರೀಮತಿ ಲೀಲಾದೇವಿ.—ಆರ್. ಪ್ರಸಾದ್.—ಸ್ವಾಮಿ, ಬೇರೆ ರಾಜ್ಯಕ್ಕೆ ಕಬ್ಬು ಹೋಗತ್ತಿರುವಂತಹ ವಿಷಯವನ್ನು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಇದನ್ನು ತಡೆಗಟ್ಟಬೇಕಾದರೆ ೨೫೦೦ ಟನ್ ಕಬ್ಬನ್ನು ಆರೆಯುವಂಥ ಸಾಮರ್ಥ್ಯ ಇರುವಂತಹ ಕಾರ್ಖಾನೆಗಳು ನಮ್ಮಲ್ಲಿ ಇವೆ, ಹಾಗೂ ಕಬ್ಬೂ ಸಹ ಸಾಕಷ್ಟು ಬರುತ್ತಿದೆ ಎಂಬುದನು ಮನಗಂಡು, ಈ ಕಾರ್ಖಾನೆಗೆ ರೆಕಮೆಂಡ್ ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಕೇಂದ್ರಕ್ಕೆ ಒತಾಯ್ಸ ಮಾಡಿ ಸಾಧ್ಯವಾದಷ್ಟು ಬೇಗೆ ಇದಕ್ಕೆ ಲೈಸೆನ್ಸ್ ದೊರಕುವಂತೆ ಮಾಡಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಜೆ.ಹೆಚ್. ಪಟೇಲ್.—ಆಗಬಹುದು.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೧ (೨೨೩)ಕ್ಕೆ ಗೃಹ ಖಾತೆಯವರು ಉತ್ತರ ನೀಡುತ್ತಾರೆ. ಆದುದರಿಂದ ಇದನ್ನು ಮುಂದೂಡಲಾಗಿದೆ. ಇವತ್ತು ತೆಗೆದುಕೊಳ್ಳುವುದಿಲ್ಲ.

## ರಾಜ್ಯದಲ್ಲಿ ವಿದ್ಯುತ್ ಸೌಲಭ್ಯ ಒದಗಿಸಬೇಕಾಗಿರುವ ಹಳ್ಳಿಗಳ ಬಗ್ಗೆ.

೬೨. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿದ್ಯುತ್ ಸೌಲಭ್ಯ ಒದಗಿಸಬೇಕಾಗಿರುವ ಹಳ್ಳಿಗಳು ಎಷ್ಟು ?

ಆ) ಇವುಗಳಲ್ಲಿ ಮುಖ್ಯ ಹಳ್ಳಿಗಳು ಎಷ್ಟು ಹಾಗೂ ದಾಖಲೆ ಗ್ರಾಮಗಳು ಎಷ್ಟು (ಹ್ಯಾಮ್ಲೆಟ್)

ಇ) ಆ ಪೈಕಿ ಈಗಾಗಲೇ ಎಷ್ಟು ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಬಾಕಿ ಉಳಿದಿರುವ ಹಳ್ಳಿಗಳಿಗೆ ಇನ್ನು ಎಷ್ಟು ವರ್ಷಗಳಲ್ಲಿ ವಿದ್ಯುತ್ ಒದಗಿಸಲಾಗುವುದು.

ಈ) ವಿದ್ಯುತ್ ಒದಗಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ೧೯೭೧ರ ಜನಗಣತಿಯಂತೆ ೩೧-೧೨-೮೭ರಂದು ೧೮೨ ಹಳ್ಳಿಗಳಿಗೆ ಹಾಗೂ ೧೯೮೧ರ ಜನಗಣತಿಯಂತೆ ೬೧೯ ಹಳ್ಳಿಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ.